International Journal of Kannada Research 2016; 2(3): 41-44

International Journal of Kannada Research
www.kannadajournal.com

ISSN: 2454–5813
IJSR 2016; 2(3): 41-44
© 2016 IJKS
www.kannadajournal.com
Received: 07-04-2016
Accepted: 13-05-2016

**Dr. Neelambika Policepatil (Sherikar)**
Godutai Doddappa Appa Degree College For Women, S.B.Temple Road, Brahampur, Kalaburagi, Karnataka-585103.

**Correspondence**
**Dr. Neelambika Policepatil (Sherikar)**
Godutai Doddappa Appa Degree College For Women, S.B.Temple Road, Brahampur, Kalaburagi, Karnataka-585103.

# ಕಲಬುರ್ಗಿ ಶರಣಬಸವೇಶ್ವರ ಮಹಾದಾಸೋಹ ಸಂಸ್ಥಾನದ ಜ್ಞಾನ ದರ್ಶನ

**Dr. Neelambika Policepatil (Sherikar)**

ಮಹಾದಾಸೋಹಿ, ದಾಸೋಹಭಾಂಡಾರಿ ಎಂದು ಪ್ರಖ್ಯಾತಗೊಂಡ ಶರಣಬಸವೇಶ್ವರರು, ತನ್ನ ಪಾಡಿಗಲ್ಲದೆ ಪರಹಿತ ಮಾಡುತಾ ಪರಮಾತ್ಮನನ್ನು ಕಂಡ ಮಹಾಪುರುಷರು. ಗುಲಬರ್ಗಾ ಜಿಲ್ಲೆಯ ಅರಳಗುಂಡಿಗೆಯ ಸಾಲೋಕ್ಯ ಮನೆತನದ ಸಂಗಮ್ಮ, ಮಲಕಪ್ಪ ದಂಪತಿಗಳ ಉದರದಲ್ಲಿ ಜನಿಸಿದವರು. ಕೃಷಿ ಮನೆತನದವರಾದ ಶರಣರು ಕೃಷಿಯನ್ನೆ ಕಾಯಕವನ್ನಾಗಿಸಿಕೊಂಡು ದಾಸೋಹ ಮಾಡಿದವರು. ತಮ್ಮ ಕರಕಿ ಹೊಲವನ್ನೇ ನಿಷ್ಠೆಯಿಂದ ಬಿತ್ತಿದರು. ಅವರ ಕಾಯಕ ನಿಷ್ಠೆಯಿಂದ ಇಡೀ ಹೊಲವೇ ಬೆಳೆದು ನಿಂತಿತು. ಆದರೆ ಶರಣರು ಹೊಲಕ್ಕೆ ಬೇಲಿ ಹಚ್ಚಲಿಲ್ಲ, ಮಂಚ ಹಾಕಿ ಹಕ್ಕಿ ಹೊಡದಿಲ್ಲ, ಮನುಷ್ಯರೊಂದಿಗೆ ದನಕರು ಹಕ್ಕಿಪಕ್ಕಿ ಹೊಲದ ಬೆಳೆಯನ್ನು ತಿಂದು ಸಂತೋಷಪಟ್ಟವು. ತಿಂದ ಪ್ರಾಣಿಗಳಿಗೆ ನೀರಿನ ವ್ಯವಸ್ಥೆಯನ್ನು ಶರಣರು ಮಾಡಿದರು. ಹೊಲದ ನಾಲ್ಕು ಮೂಲೆಗಳಿಗೆ ರಂಜಣಗಿಗಳನ್ನಿಟ್ಟು ತಾವೇ ಸ್ವತಃ ನೀರು ತುಂಬಿದರು. ಅವರ ಈ ಮಹೋನ್ನತ ದಾಸೋಹ ಕಂಡು ಇಂದಿಗೂ ಜನಪದರು ಹೀಗೆ ಹಾಡುತ್ತಾರೆ.

> ‘ಹಕ್ಕಿ ಬಂದಾವ ಹಾರಿ ತೆನಿಯ ತಿಂದಾವ ಹೀರಿ
> ಗಿಡದ ನೆರಳಿಗೆ ಕುಂತಾವ । ಮಾತಾಡುತ್ತಾವ
> ಶಿವಹಾನ ಏನು ಶರಣಪ್ಪ.

ಯಾರು ಎಷ್ಟೇ ತಿಂದರೂ, ಶರಣಬಸವರು ತಮ್ಮ ಹೊಲದಲ್ಲಿ ಸಮೃದ್ಧವಾದ ರಾಶಿ ಮಾಡಿದರು. ಮಾಡಿದ ರಾಶಿಯಲ್ಲಿ ಶರಣರ ದಾಸೋಹ ಕ್ರಿಯೆ ನಿರಂತವಾಯಿತು. ಅವರಿಂದ ಅನೇಕ ಶಿವಲೀಲೆಗಳು ಅರಳಗುಂಡಿಗೆಯಲ್ಲಿ ನಡೆದವು.

ಹೀಗೆ ಶರಣಬಸವರ ವ್ಯಕ್ತಿತ್ವ ದೊಡ್ಡದಾಗುತ್ತಾ ನಡೆದಂತೆ, ಕೆಲವರಿಗೆ ಅದನ್ನು ಸಹಿಸಿಕೊಳ್ಳಲಾಗಲಿಲ್ಲ. ಯಾರೊಂದಿಗೂ ವೈರತ್ವ ಮಾಡದೆ ಯಾರಿಗೂ ದ್ರೋಹ ಬಗೆಯದ ಶರಣರು ತಾವೇ ಹುಟ್ಟಿದೂರನ್ನು ತೊರೆದರು. ಜೀವನದಿಂದ ಜೀವನಕ್ಕೆ ಬೆಳೆಯುತ್ತ ಬಂದ ದಾಸೋಹ ಜೀವನದ ಅನುಷ್ಠಾನ ಮಾಡುತ್ತಿದ್ದ ದಾಸೋಹಿಗಳೊಡನೆ ಮಹಾದಾಸೋಹಿ ಶರಣಬಸವರು ಸತ್ಸಂಗ ಮಾಡುತ್ತ ತಮ್ಮ ಮಹಾದಾಸೋಹ ಪಯಣವನ್ನು ಕಲ್ಯಾಣ ನಾಡಿನತ್ತ ಮುಖವಾಗಿಸಿ ಮುನ್ನಡೆಸಿದರು. ಕಲ್ಯಾಣದತ್ತ ಹೊರಟರು. ದಾರಿಯಲ್ಲಿ ಅನೇಕ ಪವಾಡಗಳನ್ನು ಮಾಡುತ್ತಾ ಜನರನ್ನು ಸನ್ಮಾರ್ಗಕ್ಕೆ ಹಚ್ಚಿ ಕಲಬುರ್ಗಿ ಸಮೀಪದ ಫರಹತಾಬಾದ ಹಳ್ಳಿಗೆ ಬಂದರು. ಅಲ್ಲಿ ಜನರು ಎದುರಿಸುತ್ತಿರುವ ಡೋಂಗಿ ಬರವನ್ನು ಅಳಿಸಿದರು. ಹೀಗಾಗಿ ಶರಣಬಸವರು ಈ ಭಾಗದ ಜನತೆಗೆ ದೈವಸ್ವರೂಪದವರಾದರು.

ಆ ಸಂದರ್ಭದಲ್ಲಿ ಕಲಬುರ್ಗಿಯಲ್ಲಿ ಆದಿ ದೊಡ್ಡಪ್ಪ ಶರಣರು ಬಹಳ ಪ್ರಭಾವಿತ ವೆನಿಸಿದ್ದರು. ಅವರ ತಾಯಿ ಲಿಂಗೈಕ್ಯರಾಗುವ ಸಂದರ್ಭದಲ್ಲಿ ಮಗನಿಗೆ ಮುಂದಿನ ದಿನಗಳಲ್ಲಿ ಮಹಾರತ್ನವೊಂದು ಸಿಗುವದೆಂದು, ಅದನ್ನು ಜೋಪಾನವಾಗಿರಿಸಿಕೊಳ್ಳಲು ತಿಳಿಸುವರು. ಆಗ ದೊಡ್ಡಪ್ಪ ಶರಣರಿಗೆ ಆ ರತ್ನ ಯಾವುದೆಂದು ತಿಳಿಯಲಿಲ್ಲ. ಆದರೆ ಫರಹತಾಬಾದಿಗೆ ಶರಣರ ದರ್ಶನಕ್ಕೆಂದು ಹೋದಾಗ ತಾಯಿ ಹೇಳಿದ ರತ್ನದ ನೆನಪಾಯಿತು. ಆ ಮಹಾರತ್ನವನ್ನು ದೊಡ್ಡಪ್ಪ ಶರಣರು ಭಕ್ತಿ, ಗೌರವದಿಂದ ತಮ್ಮ ಮಹಾಮನೆಗೆ ಕರೆತಂದರು. ದೊಡ್ಡಪ್ಪ ಶರಣರ ಅರ್ಚನೆ–ಅರ್ಪಣ ಅನುಭಾವದ ಮೆನೆಯಲ್ಲಿ ಶರಣರು ವಾಸ್ತವ್ಯ ಮಾಡಿದರು.

ಕಲಬುರ್ಗಿಯಲ್ಲಿ ಆದಿ ದೊಡ್ಡಪ್ಪ ಶರಣರ ದಾಸೋಹ ಮಹಾಮನೆಯಲ್ಲಿ ನಡೆಯುತ್ತಿದ್ದ ದಾಸೋಹನುಸಂಧಾನದಲ್ಲಿ ಕಲ್ಯಾಣ ಶರಣರ ದಾಸೋಹ ಪರಂಪರೆಯನ್ನು ಗುರುತಿಸಿಕೊಂಡರು. ಅಲ್ಲಮಪ್ರಭುದೇವರು ಬಸವಾದಿ ಶಿವಶರಣರ ಅನುಭವ ಮಂಟಪಕ್ಕೆ ಅಧ್ವರ್ಯತನ ವಹಿಸಿ ನಿಂದಂತೆ,

ಶರಣಬಸವರು ಆದಿ ದೊಡ್ಡಪ್ಪ ಶರಣ-ನೀಲಮ್ಮ ತಾಯಿ ದಂಪತಿಗಳ ಅರ್ಚನ-ಅರ್ಪಣ-ಅನುಭಾವ ದಾಸೋಹಕ್ಕೆ ಅಧ್ವರ್ಯವಹಿಸಿ ನಿಂತುಕೊಂಡರು. ಶಿವನೇ ಮನುಷ್ಯರೂಪದಲ್ಲಿ ಬಂದು ಸಿರಿಯಾಳ-ಚಂಗಳೆ, ನೀಲೂರು ನಿಂಬೆಕ್ಕರ, ಭಕ್ತಿ ಪರೀಕ್ಷೆ ಮಾಡಿದಂತೆ, ಶರಣಬಸವರು ಅಪೇಕ್ಷಿತ ವೃದ್ಧ ದಂಪತಿಗಳಿಗೆ ಆದಿ ದೊಡ್ಡಪ್ಪ ದಂಪತಿಗಳ ಕರುಳಿನ ಕುಡಿಯನ್ನೇ ನೀಡಿ ಅವರ ತನ-ಮನಗಳನ್ನು ಅಲ್ಲಾಡಿಸಿ ನೋಡಿದರು. ಮನುಷ್ಯನ ಆತ್ಮದಲ್ಲಿ ಪರಮಾತ್ಮನಿರುವೆನೆಂದರಿತ ಆ ಶರಣ ದಂಪತಿಗಳು ಅದರಿಂದ ಎಳ್ಳಷ್ಟೂ ವಿಚಲಿತರಾಗಲಿಲ್ಲ. ಶರಣಬಸವರು ದೊಡ್ಡಪ್ಪ ಶರಣರ ದಾಸೋಹ ಭಕ್ತಿಗೆ ಅನುಕಂಪಿತರಾದರು. ಅವರಿಗೆ ಶರಣಬಸವರು ಆಧ್ಯಾತ್ಮ ಸಂಸ್ಕಾರ ನೀಡಿದುದಲ್ಲದೆ, ಅವರ ವಂಶದಲ್ಲಿ ಹುಟ್ಟಿಬಂದವರಿಗೆಲ್ಲರಿಗೂ ಆ ಸಂಸ್ಕಾರ ದೊರಕುವಂತೆ ಮಾಡಿ, ತಾನೆ ಮತ್ತೆ ಮತ್ತೆ ಅವರ ವಂಶದ ಮಗನಾಗಿ ಹುಟ್ಟಿ ಬರುವೆನೆಂದು ಹೇಳಿ ಅನುಗ್ರಹಿಸಿದರು. ಯಾವ ದಾಸೋಹ ಮಹಾಕಾರ್ಯಕ್ಕೆ ತಮ್ಮ ಮಗನು ಅರ್ಪಿತವಾಗಿರುವೆನೋ ಆ ದಾಸೋಹ ಮಹಾಕಾರ್ಯ ನಿರಂತರವಾಗಿ ತಮ್ಮ ದಾಸೋಹ ಮಹಾಮನೆಯಲ್ಲಿ ನಡೆಯಲೆಂದು ಆದಿ ದೊಡ್ಡಪ್ಪ ಶರಣರು ಭಿನ್ನವಿಸಿಕೊಂಡರು. ಆ ಶರಣ ದಂಪತಿಗಳ ತ್ಯಾಗಮಹಿಮೆ, ಮಹಾದಾಸೋಹ ಧರ್ಮವೇ ಮಹಾದಾಸೋಹ ಪೀಠವಾಗಿ ಶರಣಬಸವೇಶ್ವರ ಸಂಸ್ಥಾನದಲ್ಲಿ ಶಿವಜೀವನದಿಂದ ಜೀವನಕ್ಕೆ ಮುಂದುವರೆಯುತ್ತ ಬೆಳೆಯುತ್ತಲಿದೆ.

ಶರಣಬಸವೇಶ್ವರರ ಕಾಲದಿಂದಲೂ ಇಲ್ಲಿ ತ್ರಿಕಾಲ ಗುರು-ಲಿಂಗ-ಜಂಗಮ ಪೂಜೆ ದಾಸೋಹ ಪರಂಪರೆಯು ಪೀಠಾಧಿಪತಿಗಳ ಬದುಕಿನ ಸಿದ್ಧಿಯಲ್ಲಿ ಅನೂಚಾನವಾಗಿ ಮುಂದುವರಿಯುತ್ತಾ ಸಂಸ್ಥೀಕರಣಗೊಂಡಂತಾಗಿದೆ. ಶರಣಬಸವರು 40 ವರ್ಷಗಳ ಕಾಲ ತ್ರಿಕಾಲ ಲಿಂಗಪೂಜೆ-ಜಂಗಮ ದಾಸೋಹ ಯಾವ ದಾಸೋಹ ಮಹಾಮನೆಯ ಶಿವಪೂಜಾ ಗೃಹದಲ್ಲಿ ನಡೆಸುತ್ತ ತಪಸ್ಸುಗೈದರೋ, ಅದೇ ಮನೆಯಲ್ಲಿಂದು ಅವರು ತಮ್ಮ ಕೊನೆಯ ಇಷ್ಟಲಿಂಗಪೂಜಾ ಸಂದರ್ಭದಲ್ಲಿ ಹೊತ್ತಿಸಿದ ನಂದಾದೀಪವು ಬೆಳಗುತ್ತ ಲೋಕದ ಜನರ ಕತ್ತಲೆಯನ್ನು ಅಳಿಸುತ್ತಲಿದೆ. ಈ ಮಹಾ ಬೆಳಗನ್ನೇ ತಮ್ಮಲ್ಲಿ ಧಾರಣ ಮಾಡಿದ ಮುಂದಿನ ಪೀಠಾಧಿಪತಿಗಳೆಲ್ಲರೂ ಶರಣಬಸವರ ಆತ್ಮಪ್ರಕಾಶದ ಚಿತ್ಕಿರಣಗಳೇ ಆದರು. ಸಕಲ ಜೀವರಲ್ಲಿ ಶಿವನನ್ನು ಕಂಡು ಅವರೆಲ್ಲರಿಗೆ ಹಿತವನ್ನುಂಟು ಮಾಡುವ ದಾಸೋಹ ತಪಸ್ಸುಗೈದರು, ಗೈಯುತ್ತಿದ್ದಾರೆ.

ಪರಹಿತದಲ್ಲಿ ಪರಮಾತ್ಮನನ್ನು ಕಂಡ ಪರಮ ದಾಸೋಹಿ ಶರಣಬಸವರು ವೃದ್ಧ ಜಂಗಮನ ದಮ್ಮನ್ನು ತಾವು ಸ್ವೀಕರಿಸಿ, ಅವನಿಗೆ ತಮ್ಮ ಆರೋಗ್ಯ ಭಾಗ್ಯವನ್ನು ಅನುಗ್ರಹಿಸಿ ಕ್ರಿ.ಶ 1822 ರಲ್ಲಿ ಲಿಂಗೈಕ್ಯರಾದರು.

ಮಹಾದಾಸೋಹಿ ಶರಣಬಸವರ ಲಿಂಗೈಕ್ಯದ ನಂತರದಲ್ಲಿ ಅವರ ಮಹಾದಾಸೋಹ ಜೀವನ ಪರಂಪರೆಯು ಆದಿ ದೊಡ್ಡಪ್ಪ ಶರಣರಿಗೆ ಅನುಗ್ರಹಿತವಾಯಿತು. ಅವರು ಪೀಠಾಧಿಪತಿಗಳಾಗಿ 24 ವರ್ಷಗಳ ಕಾಲ ಶರಣಬಸವರ ಜೀವನದ ಮೌಲ್ಯಗಳ ಸಿದ್ಧಿಯ ಅನುಷ್ಠಾನವನ್ನು ಕೈಗೊಂಡರು. ಶರಣಬಸವರ ಸಮಾಧಿಯ ಮೇಲಿನ ದೇವಾಲಯಕ್ಕೆ ಅಡಿಗಲ್ಲು ಇಟ್ಟಿದ್ದು ಇವರ ಕಾಲದಲ್ಲಿಯೇ ದೇಶದ ಬೇರೆ ಬೇರೆ ಭಾಗಗಳಿಂದ ಚತುರ ಶಿಲ್ಪಿಗಳನ್ನು ಕರೆಯಿಸಿ ಸಮಾಧಿ ಮಂದಿರದ ನಿರ್ಮಾಣ ಕಾರ್ಯಕ್ಕೆ ಶ್ರೀಕಾರ ಬರೆದರು. ಶರಣಬಸವರು ತಮ್ಮ ಜೀವಿತದ ಕಾಲದಲ್ಲಿ ದೇಹವನ್ನು ದೇವಾಲಯವೆಂದು ಭಾವಿಸಿದರು. ಅವರ ಭಾವನೆಗೆ ಪ್ರತೀಕವೆಂಬಂತೆ ದೇವಾಲಯ ನಿರ್ಮಾಣವಾಗಬೇಕೆಂಬ ಸಂಕಲ್ಪ ಆದಿ ದೊಡ್ಡಪ್ಪ ಶರಣರು ಮಾಡಿಕೊಂಡರು. ಅನೇಕ ಉದಾತ್ತ ಚಿಂತನೆಗಳಿಗೊಂದು ಪ್ರತಿಮೆಯಂತೆ ಆದಿ ದೊಡ್ಡಪ್ಪ ಶರಣರು ಶರಣಬಸವರ ಸಮಾಧಿ ಮೇಲಿನ ದೇವಾಲಯವನ್ನು ನಿರ್ಮಿಸಿದರು.

ಆದಿ ದೊಡ್ಡಪ್ಪ ಶರಣರ ಲಿಂಗೈಕ್ಯದ ನಂತರದಲ್ಲಿ ಅವರ ಮಹಾದಾಸೋಹ ಜೀವನ ಅವರ ಪುತ್ರ ಎರಡನೆಯ ಶರಣಬಸವಪ್ಪನವರಿಗೆ ಅನುಗ್ರಹಿತವಾಯಿತು. ಅವರು 25 ವರ್ಷಗಳ ಕಾಲ ದಾಸೋಹ ಸೇವೆಗಾಗಿ ತಮ್ಮ ತನು ಮನ-ಧನವನ್ನು ಅರ್ಪಿಸಿ ದಾಸೋಹ ಮಾಡಿದರು. ಲೋಕದ ಕಣ್ಣಿಗೆ ಮರುಳರಂತೆ ಕಂಡ ಎರಡನೆಯ ಶರಣಬಸವಪ್ಪನವರು "ಹುಚ್ಚಪ್ಪ ಶರಣ" ರೆಂದೇ ಖ್ಯಾತರಾದರು. ಶಿವನ ಹುಚ್ಚಿನ ಅಮಲಿನಲ್ಲಿ ಸದಾ ಇರುತ್ತಿದ್ದ ಅವರು ಸಾಮಾನ್ಯರ ಕಣ್ಣಿಗೆ ಹುಚ್ಚನಂತೆ ಕಂಡುದು ಸಹಜವೆ. ಇವರ ಕಾಲದಲ್ಲಿ ಮಹಾದಾಸೋಹ ಪೀಠವು ಸಂಪತ್ತಿನಿಂದ ತುಂಬಿ ಬೆಳೆಯತೊಡಗಿತು. ವಾಕ್ ಪರುಷ ಹೊಂದಿದ್ದ ಹುಚ್ಚ ಶರಣಬಸವಪ್ಪನವರು ನುಡಿದ್ದದ್ದು ಸತ್ಯವಾಗುತ್ತಿತ್ತು. ನಂತರದಲ್ಲಿ ಮಹಾದಾಸೋಹ ಪೀಠದ ಮಹಾಜೀವನ ಸಂಸ್ಕೃತಿಯ ಪರಂಪರೆಯನ್ನು ಕ್ರಮವಾಗಿ ಬಸವಣ್ಣಪ್ಪ ಅಪ್ಪ, ಲಿಂಗಬಸವಪ್ಪ ಅಪ್ಪ, ಮೂರನೆಯ ಶರಣಬಸವಪ್ಪ ಅಪ್ಪ ಅವರು ಧಾರುಣ ಮಾಡಿಕೊಂಡು ಮುಂದುವರೆಸಿದರು.

ಐದನೆಯ ಪೀಠಾಧಿಪತಿಗಳಾಗಿರುವ ಪೂಜ್ಯ ಲಿಂಗಬಸವಪ್ಪ ಅಪ್ಪಾ ಅವರ ಕಾಲದಲ್ಲಿಯೇ ಶರಣಬಸವೇಶ್ವರ ವಿದ್ಯಾವರ್ಧಕ ಸಂಘ ಅಂಕುರಾರ್ಪಣೆವಾದುದ್ದು. ಮಹಾದಾಸೋಹ ಮನೆಯ ಮೇಲಿನ ಮಹಡಿಯಲ್ಲಿ ಕನ್ನಡದ ಶಾಲೆ ಆರಂಭಿಸುವದರ ಮೂಲಕ ವಿದ್ಯಾವರ್ಧಕ ಸಂಘವು ತನ್ನ ನಾಂದಿಯನ್ನು ಕ್ರಿ.ಶ. 1903 ರಲ್ಲಿಯೇ ಹಾಡಿತು. ಅಂದು ಈ ಶಾಲೆಯಲ್ಲಿ ಪ್ರಥಮ ವರ್ಗದ ವಿದ್ಯಾರ್ಥಿಯಾಗಿ ಓದಿದ ಬಸವಕಲ್ಯಾಣದ ನಿವಾಸಿ ಆರ್ಯ ಸಮಾಜದ ಅನುಯಾಯಿ, ಖ್ಯಾತ ವಕೀಲ ಶತಾಯುಷಿ ದಿ. ಭಾನುಪ್ರತಾಪಸಿಂಗ ಅವರು ದಾಖಲಾತಿಗಳನ್ನು ಒದಗಿಸಿಕೊಟ್ಟಿದ್ದಾರೆ. ಆರನೆಯ ಪೀಠಾಧಿಪತಿಗಳಾಗಿದ್ದ ಪೂಜ್ಯ ಮೂರನೆಯ ಶರಣಬಸವಪ್ಪ ಅಪ್ಪನವರ ತರುವಾಯ ಪೀಠಾಧಿಪತಿಗಳಾಗಿದ್ದವರು ಪರಮ ಪೂಜ್ಯ ದೊಡ್ಡಪ್ಪ ಅಪ್ಪನವರು.

**ಪೂಜ್ಯ ಶ್ರೀ ದೊಡ್ಡಪ್ಪ ಅಪ್ಪ**

ಶರಣಬಸವರು ಶಿವರೂಪಿಗಳಾಗಿದ್ದಂತೆ ಪೂಜ್ಯ ದೊಡ್ಡಪ್ಪ ಅಪ್ಪ ಅವರು ಶಿವರೂಪಿಗಳೇ ಆಗಿದ್ದರು. ಅವರಿಗೆ ದೊರೆತ ಆರು ಜನ ಮಹಾದಾಸೋಹ ಶಕ್ತಿಗಳ ಉನ್ನತ ಪರಂಪರೆಯು ಪೂಜ್ಯ ಅಪ್ಪ ಅವರಿಗೆ ಮಹೋನ್ನತ ಜೀವನ ಸಾಧಿಸಿಕೊಳ್ಳುವುದಕ್ಕೆ ಸಾಧಕವಾಯಿತು.

ಕ್ರಿ.ಶ.1817 ಶ್ರಾವಣ ಬಹಳ ದಶಮಿ ( ಕ್ರಿ.ಶ.1895) ಯಂದು ಜನಿಸಿದ ಮಹಾದಾಸೋಹಿ ದೊಡ್ಡಪ್ಪ ಅಪ್ಪ 80 ವರ್ಷಗಳ ಕಾಲ ದೀರ್ಘಾವಧಿಯ ಅರ್ಚನ-ಅರ್ಪಣ-ಅನುಭಾವದ ತಪಸ್ಸುಗೈದುದು ಮಹತ್ವದ ಸಂಗತಿ. ಶಿವಲೀಲೆಗಿಳಿದಾಗ ದಾಸೋಹಿ; ಲೀಲೆಯಾದಡೆ ಉಮಾಪತಿ, ಲೀಲೆ ಮುಗಿದೊಡೆ ಸ್ವಯಂಭು, ಹೀಗೆ ದೊಡ್ಡಪ ಅಪ್ಪಾ ಅವರು ಸರ್ವಾಂಗಲಿಂಗವಾಗಿ ಶಿವಜೀವನದ ಸಿದ್ಧಿಯಿಂದ ದಾಸೋಹ ಮಹಾಮನೆಯನ್ನು ಶಿವಜೀವರ ಮಂದಿರವಾಗಿ ಮಾಡಿದರು.

ಮಹಾದಾಸೋಹಿ ದೊಡ್ಡಪ್ಪ ಅಪ್ಪ ಅವರ ಶಿವಜೀವನದ ಪೂರ್ವಾರ್ಧವು ನಾಡಿನೊಂದಿಗೆ ಒಟ್ಟು ದೇಶವೇ ಪರದಾಸ್ಯದಲ್ಲಿ ಬಿದ್ದು ನರಳುತ್ತಿದ್ದ ಪರಕೀಯರ ಕಾಲವಾಗಿತ್ತು. ಅಪ್ಪ ಅವರು ಅಂದಿನ ವಾತಾವರಣವನ್ನು ಆಧ್ಯಾತ್ಮಿಕ ಜೀವನ ದೃಷ್ಟಿಕೋನದಿಂದಲೇ ಕಂಡು ಅರಿತುಕೊಂಡರು. ಶಿವನು ಸ್ವತಂತ್ರನು. ಸ್ವಾವಲಂಬನು. ಹಾಗೆಯೇ ಸಕಲ ಜೀವರಲ್ಲಿರುವ ಆತ್ಮವು ಸ್ವತಂತ್ರ ಮತ್ತು ಸ್ವಾವಲಂಬಿ. ಇಂತಹ ಆಧ್ಯಾತ್ಮಿಕ ಸೇವಕರು, ರಾಜಕೀಯ ಮುತ್ಸದ್ದಿಗಳು ಆತಂಕದ ಸ್ಥಿತಿಯಲ್ಲಿದ್ದಾಗ ಕ್ರಿ.ಶ.1918ರಲ್ಲಿ

ಒಂದೆಡೆಯಲ್ಲಿ ಹೈದರಾಬಾದಿನ ಉಸ್ಮಾನಿಯ ವಿಶ್ವವಿದ್ಯಾಲಯ ಸ್ಥಾಪಿತವಾದರೆ, ಇನ್ನೊಂದೆಡೆಯಲ್ಲಿ ಪೂಜ್ಯ ದೊಡ್ಡಪ್ಪ ಅಪ್ಪ ಅವರು ಕ್ರಿ.ಶ. 1903 ರಿಂದ ನಡೆದು ಬರುತ್ತಿದ್ದ ಕನ್ನಡ ಶಿಕ್ಷಣ ನೀಡುತ್ತಿದ್ದ ತಮ್ಮ ಶಿಕ್ಷಣ ಸಂಸ್ಥೆಗೆ ನೋಂದಣಿ ಮಾಡಿಸುವುದರ ಮೂಲಕ ಜ್ಞಾನದಾಸೋಹಕ್ಕೆ ಬಲವಾದ ಆಸ್ತಿಭಾರ ಹಾಕಿದರು. ಸಾರ್ವಜನಿಕ ಗ್ರಂಥಾಲಯವನ್ನು ತೆರೆದು ಅದರ ಮೂಲಕ ಶಿಕ್ಷಣದ ಬೆಳಕನ್ನು ಜನಾಂಗದಲ್ಲಿ ಬೆಳಗುವಂತೆ ಮಾಡಿದರು.

ಎಂಭತ್ತು ವರ್ಷಗಳ ಕಾಲ ನಿರಂತರವಾಗಿ ಶಿವಜೀವನದ ತಪಸ್ಸುಗೈದ ಅಪ್ಪ ಅವರು 88ನೇ ವಯಸ್ಸಿನಲ್ಲಿ (15–09–1983) ಭಾದ್ರಪದ ಶುದ್ಧ ನವಮಿಯಂದು ಲಿಂಗೈಕ್ಯರಾದರು. ಅವರ ತರುವಾಯ ಅವರ ಜೇಷ್ಠ ಸುಪುತ್ರರಾದ ಪರಮಪೂಜ್ಯ ಡಾ॥ ಶರಣಬಸವಪ್ಪ ಅಪ್ಪ ಅವರು ಮಹಾದಾಸೋಹ ಸಂಸ್ಥಾನಕ್ಕೆ ಎಂಟನೆಯ ಪೀಠಾಧಿಪತಿಗಳಾದರು.

**ಪೂಜ್ಯ ಡಾ॥ ಶರಣಬಸವಪ್ಪ ಅಪ್ಪಾ**

ಡಾ॥ ಎಲ್. ಬಸವರಾಜು ಅವರು ಹೇಳುವಂತೆ " ಪೂಜ್ಯ ಶ್ರೀ ಶರಣಬಸವಪ್ಪ ಅಪ್ಪ ಅವರು ಶ್ರೀ ದೊಡ್ಡಪ್ಪ ಅಪ್ಪನವರ ಜೇಷ್ಠ ಪುತ್ರರೇ ಆಗಿ ಅವರ ಮಾನಸ ಪುತ್ರರೂ ಆಗಿರುವರು. ನಮ್ಮಲ್ಲಿ ಔದಾರ್ಯವಿದ್ದರೆ ಮಾನಸ ಸರೋವರಕ್ಕೆ ಹೋಲಿಸಬಹುದು. ದೊಡ್ಡಪ್ಪನವರ ಔನ್ನತ್ಯ ಧವಳಿಮೆ ಮತ್ತು ಓಜಸ್ಸು ಶರಣಬಸವಪ್ಪನವರ ಪ್ರಸನ್ನ ವಿಸ್ತಾರದಲ್ಲಿ ಸಮಗ್ರವಾಗಿ ಪ್ರತಿಫಲಿತವಾಗಿದೆ. ಅವರು ಸಾಂಪ್ರದಾಯಿಕ ಧರ್ಮವನ್ನು ಸ್ವಸ್ವರೂಪದಲ್ಲಿ ಹೊರತಾಗಿ ಎಂದಿಗೂ ಅತಿಶಯಿಸಿದವರು ಅಲ್ಲ. ಮೌಢ್ಯಾಚಾರ ರೂಪದಲ್ಲಿ ಹೊರತಾಗಿ ಅಲ್ಲಗಳೆದವರೂ ಅಲ್ಲ ಭಾರತದ ಪ್ರಪ್ರಥಮ ಸಮತಾವಾದಿಯೆನ್ನಬಹುದಾದ ಕಲ್ಯಾಣ ಬಸವನ ಜೀವನ ಸೂತ್ರದ ಸಾರವಾದ ಒಂದು ಸಾಮೂಹಿಕ ಸಹಕಾರ ಪದ್ಧತಿಯ ಮಹಾ ಪ್ರಯೋಗ ಪೂಜ್ಯ ಶ್ರೀ ಶರಣಬಸವಪ್ಪ ಅಪ್ಪ ಅವರ ದಾಸೋಹ ಮಹಾಮನೆಯಲ್ಲಿ ನಡೆಯುತ್ತಿದೆಯೆನ್ನಬಹುದು".

14/11/1935 ರಂದು ಜನಿಸಿದ ಪೂಜ್ಯ ಶರಣಬಸವಪ್ಪ ಅಪ್ಪ ಅವರು ಎಂ.ಎ.ತತ್ವಜ್ಞಾನ ಪದವೀಧರರು. ಅವರು ವಿದ್ಯಾರ್ಥಿಯಾಗಿದ್ದ ಸಮಯದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಎಂ.ಎ.ತತ್ವಜ್ಞಾನ ಪಠ್ಯಕ್ರಮದಲ್ಲಿ ವೀರಶೈವ ತತ್ವಜ್ಞಾನವಿರಲಿಲ್ಲ. ಎರಡು ಕೋಟಿ ವೀರಶೈವ ಜನಾಂಗದ ತತ್ವಜ್ಞಾನ ಅಭ್ಯಾಸದ ಬೇಡಿಕೆ ಇಟ್ಟಾಗ ಸಮಾಜದ ಅವಶ್ಯಕತೆಯನ್ನು ಪೂರೈಸುವುದು ವಿಶ್ವವಿದ್ಯಾಲಯದ ಕರ್ತವ್ಯವೆಂದರಿತ ಗುಣಗ್ರಾಹಿಗಳಾಗಿದ್ದ ಅಂದಿನ ಕುಲಪತಿಗಳಾದ ಡಾ.ಡಿ.ಸಿ ಪಾವಟೆಯವರು ತಕ್ಷಣ ಒಪ್ಪಿಕೊಂಡು ಎಂ.ಎ.ತತ್ವಜ್ಞಾನ ಪಠ್ಯಕ್ರಮದಲ್ಲಿ ವೀರಶೈವ ತತ್ವಜ್ಞಾನದ ಅಭ್ಯಾಸ ಬಾರತದಲ್ಲಿ ಪ್ರಪ್ರಥಮವಾಗಿ ಪ್ರಾರಂಭಿಸಿದ ಶ್ರೇಯಸ್ಸು ಈ ಇಬ್ಬರಿಗೆ ಸಲ್ಲುತ್ತದೆ.

ಪೂಜ್ಯ ಡಾ. ಶರಣಬಸವಪ್ಪ ಅಪ್ಪ ಅವರು ಪೌರ್ವಾತ್ಯ ಮತ್ತು ಪಾಶ್ಚಿಮಾತ್ಯ ತತ್ವಜ್ಞಾನ ಜೊತೆಗೆ ವೀರಶೈವ ತತ್ವಜ್ಞಾನದಲ್ಲಿ ಪ್ರಾವೀಣ್ಯತೆ ಪಡೆದವರು. ಜೊತೆಗೆ ಪರಂಪರೆಯಿಂದ ದತ್ತವಾದ ಮಹಾದಾಸೋಹದ ಆಧ್ಯಾತ್ಮಿಕ ಜೀವನವನ್ನು ರೂಢಿಸಿಕೊಂಡು ಜೀವಿಸುತ್ತಿರುವರು. ಗ್ರಂಥಗಳನ್ನು ಓದಿ ಜೀವನ ಮಾಡುವುದಕ್ಕಾಗುವುದಿಲ್ಲ. ಜೀವನದ ಸತ್ವ ಸಂಪತ್ತಿನಿಂದ ಮೌಲಿಕವಾದ ಕೃತಿಗಳು ಹುಟ್ಟುತ್ತವೆ. ಈ ಮಾತು ಪೂಜ್ಯ ಡಾ. ಅಪ್ಪ ಅವರ ಜೀವನಕ್ಕೆ ಅಕ್ಷರಶಃ ಅನ್ವಯವಾಗುತ್ತದೆ.

ಕಳೆದ 3 ದಶಕಗಳಿಂದ ಕರ್ನಾಟಕ ರಾಜ್ಯ ಶೈಕ್ಷಣಿಕ ಕ್ಷೇತ್ರದಲ್ಲಿ ಆದಮ್ಯ ಸಾಧನೆಗೈಯುವ ಮೂಲಕ ಪೂಜ್ಯ ಡಾ. ಶರಣಬಸವಪ್ಪ ಅಪ್ಪಾ ಅವರು, ಹೈದ್ರಾಬಾದ ಕರ್ನಾಟಕದಲ್ಲಿ ಶೈಕ್ಷಣಿಕ ಕ್ರಾಂತಿಗೆ ನಾಂದಿ ಹಾಡಿದ್ದಾರೆ. ನಾಲ್ಕು ಇಂಜನಿಯರಿಂಗ್ ಕಾಲೇಜುಗಳು, 25 ಪಿಜಿ ಕೋರ್ಸ್‌ಗಳು ಅದರಲ್ಲಿ ಹನ್ನೆರಡು ಎಂ.ಟೆಕ್, ಐದು ಎಂ.ಬಿ.ಎ. ಒಂದು ಎಂ.ಸಿ.ಎ, ಎಂ.ಎಸ್.ಸಿ, ಭೌತಶಾಸ್ತ್ರ ಗಣಿತ, ಗಣಕಯಂತ್ರ, ಎಂ.ಎ.ಪತಿಕೋದ್ಯಮ, ಪ್ರವಾಸೋದ್ಯಮ ಮುಂತಾದ ಕೋರ್ಸಗಳನ್ನು ಈಗಾಗಲೇ ಪೂಜ್ಯರು ಆರಂಭಿಸಿದ್ದಾರೆ. ಮತ್ತು ಹೈದ್ರಾಬಾದ ಕರ್ನಾಟಕದಲ್ಲಿಯೇ ಪ್ರಥಮ ಖಾಸಗಿ ವಿಶ್ವವಿದ್ಯಾಲಯ ಸ್ಥಾಪಿಸುವದರೊಂದಿಗೆ ಉನ್ನತ ಶಿಕ್ಷಣವನ್ನು ಉನ್ನತಿಗೊಳಿಸಿದ್ದಾರೆ. "ಶರಣಬಸವ ವಿಶ್ವವಿದ್ಯಾಲಯ" ಈಗಾಗಲೇ ಕಾರ್ಯರೂಪಕ್ಕೆ ಇಳಿಯುತ್ತಿದೆ.

ರಾಜ್ಯ ಸರ್ಕಾರದಿಂದ ಸ್ಥಾಪಿಸಲ್ಪಟ್ಟ ಗುಲಬರ್ಗಾ ವಿಶ್ವವಿದ್ಯಾಲಯ ಸ್ಥಾಪನೆಯ ರೂವಾರಿಗಳಾಗಿರುವ ಅಪ್ಪಾಜಿಯವರು ತಾವೇ ಶರಣಬಸವ ವಿಶ್ವವಿದ್ಯಾಲಯ ಸ್ಥಾಪಿಸುವ ಮುಖಾಂತರ ಜ್ಞಾನ ದಾಸೋಹವನ್ನು ಮಾಡಿ ನಾಡಿನ ಅಂಧಕಾರ ಅಳಿಸಿದ್ದಾರೆ.

ಅವರ ಶೈಕ್ಷಣಿಕ ತತ್ವಗಳಲ್ಲಿ ಮುಖ್ಯವಾಗಿರುವ ತತ್ವವೆಂದರೆ ಸ್ವತಂತ್ರವಾಗಿ ವಿಚಾರ ಮಾಡುವುದು, ಸ್ವತಂತ್ರವಾಗಿ ಬರೆಯುವುದು, ಸ್ವತಂತ್ರವಾಗಿ ಮಾತನಾಡುವುದು, ಈ ಮೂರು ಗುಣಗಳನ್ನು ಅಳವಡಿಸಿಕೊಂಡರೆ ವಿದ್ಯಾರ್ಥಿಗಳು ಸ್ವತಂತ್ರವಾಗಿ ಬದುಕುವರು ಮತ್ತು ಪರ ಹಿತ ಮಾಡುತ್ತ ಉತ್ತಮ ನಾಡನ್ನು ಕಟ್ಟಬಹುದೆಂಬ ಸದುದ್ದೇಶದಿಂದ ತಮ್ಮ ಶೈಕ್ಷಣಿಕ ಸಂಸ್ಥೆಗಳಲ್ಲಿ ವಿನೂತನವಾದ ಶೈಕ್ಷಣಿಕ ವ್ಯವಸ್ಥೆಯನ್ನು ಅಳವಡಿಸಿದ್ದಾರೆ. "ಕಲಿಯುವದು ಕಲಿಸುವದು ಈ ಕಾರ್ಯವು ತನ್ನ ಪಾಡಿಗಾಗಿ ಮಾಡಿದರೆ ಉಪಜೀವನ, ಕಲಿಯುವದು ಕಲಿಸುವ ಕಾರ್ಯ ತನ್ನ ಪಾಡಿಗಲ್ಲದೆ ಪರಹಿತಕ್ಕಾಗಿ ಮಾಡಿದರೆ ಒಳ್ಳೆಯ ಜೀವನ, ಕಲಿಯುವ ಕಲಿಸುವ ಕಾರ್ಯವು ತನ್ನ ಪಾಡಿಗಲ್ಲದೆ ಪರಹಿತ ಮಾಡುವಲ್ಲಿ ಪರಮಾತ್ಮನನ್ನು ಕಾಣುವದೇ ಶಿಕ್ಷಣ ತತ್ವಜ್ಞಾನ". ಈ ತತ್ವಜ್ಞಾನವು ಇಂದು ವಿಶ್ವದ ಎಲ್ಲಾ ಶಿಕ್ಷಣ ಸಂಸ್ಥೆಗಳಿಗೂ ಅವಶ್ಯವಾಗಿದೆ. ಪೂಜ್ಯರು ತಮ್ಮ ಸಂಸ್ಥೆಯ ಎಲ್ಲಾ ಶಾಲಾ ಕಾಲೇಜುಗಳಲ್ಲಿ ಕಲಿಸುವ ಕಲಿಯುವ ಕಾರ್ಯದಲ್ಲಿ ಹೊಸ ವ್ಯವಸ್ಥೆಯನ್ನು ಜಾರಿಗೆ ತಂದಿದ್ದಾರೆ. ಪ್ರತಿ ತರಗತಿಯ ಎಲ್ಲ ಬೋಧನಾ ಅವಧಿಗಳು ಒಂದೂವರೆ ತಾಸಿನಿಂದ ಕೂಡಿದ್ದು, ನಲವತ್ತೈದು ನಿಮಿಷ ಪ್ರಾಧ್ಯಾಪಕರು ಕಲಿಸಬೇಕು. ಉಳಿದ ನಲ್ವತ್ತೈದು ನಿಮಿಷ ವಿದ್ಯಾರ್ಥಿಗಳು ಬರೆಯಬೇಕು. ಮತ್ತು ಆ ವೇಳೆಯಲ್ಲಿಯೇ ಸಾಂದರ್ಭಿಕ ಪುಸ್ತಕಗಳನ್ನು ಕೊಡುತ್ತಾರೆ. ಒಂದೆರಡು ವರ್ಷಗಳಿಂದ ತಮ್ಮ ವಿದ್ಯಾ ಸಂಸ್ಥೆಗಳಲ್ಲಿ ಈ ವ್ಯವಸ್ಥೆ ಜಾರಿಗೊಳಿಸಿರುವುದರಿಂದ ವಿದ್ಯಾರ್ಥಿಗಳಿಗೆ ಹೆಚ್ಚಿನ ಲಾಭವಾಗಿದೆ. ಪಬ್ಲಿಕ್ ಶಾಲೆಯಿಂದಲೇ ಪ್ರತಿ ವರ್ಷ ನೂರಾರು ವಿದ್ಯಾರ್ಥಿ ವೈದ್ಯಕೀಯ ಸೀಟು ಮತ್ತು 500 ರಿಂದ 600 ವಿದ್ಯಾರ್ಥಿಗಳು ಇಂಜಿನಿಯರಿಂಗ್ ಸೀಟನ್ನು ಉಚಿತವಾಗಿ ಪಡೆಯುತ್ತಿದ್ದಾರೆ.

ಕಳೆದ ಹತ್ತು ವರ್ಷಗಳಿಂದ ಇಂದಿನ ಸಮಾಜಕ್ಕೆ ಅತೀ ಅವಶ್ಯವಾಗಿ ಹೊಸ ಹೊಸ ಕೋರ್ಸ್‌ಗಳನ್ನು ತೆರೆಯುವ ಮೂಲಕ ತಾವೂ ಸ್ವತಃ ಸುಮಾರು 200 ಕೋಟಿ ರೂಪಾಯಿಗಳನ್ನು ತೊಡಗಿಸಿದ್ದಾರೆ. ಮುಂದಿನ ದಿನಗಳಲ್ಲಿ 1000 ಕೋಟಿ ರೂ. ತೊಡಗಿಸುವ ಬೃಹತ್ ಯೋಜನೆಯನ್ನು ಕೈಗೊಂಡಿದ್ದಾರೆ. ಈ ಮಹನಿಯರ ಶೈಕ್ಷಣಿಕ ಸೇವೆಯಿಂದ ಇಡೀ ಉತ್ತರ ಕರ್ನಾಟಕದ ಸರ್ವತೋಮುಖ ಅಭಿವೃದ್ಧಿ ನಿರಂತರವಾಗಿ ಸಾಗಿದೆ. ಪೂಜ್ಯರು ಎಲ್ಲೆಲ್ಲಿ ಅತ್ಯುತ್ತಮವಾದದ್ದು ಇದೆಯೋ ಅದನ್ನು ಗುರುತಿಸಿ ಅದರ ಸಹಾಯವನ್ನು ಪಡೆದು ತಮ್ಮ ಸಂಸ್ಥೆಗಳನ್ನು ಕಟ್ಟುವಲ್ಲಿ ವಿನಿಯೋಗಿಸಿಕೊಳ್ಳುತ್ತಿದ್ದಾರೆ. ದಕ್ಷಿಣ ಭಾರತದಲ್ಲಿಯೇ ಪ್ರಪ್ರಥಮವಾಗಿ ಚಿತ್ರಕಲೆಯಲ್ಲಿ ಸ್ನಾತಕೋತ್ತರ ಪದವಿಯ ಶಿಕ್ಷಣ ಪ್ರಾರಂಭಿಸಿದ್ದು ಅವರ ಕೃತುತ್ವ ಶಕ್ತಿಯ ದ್ಯೋತಕವಾಗಿದೆ.

ಮಹಾದಾಸೋಹ ದರ್ಶನಕಾರರು, ತತ್ವಜ್ಞಾನಿಗಳು ಆಗಿರುವ ಪೂಜ್ಯರ ಮೂಲ ಧ್ಯೇಯವು ಈ ನೆಲದ ಜನತೆಯಲ್ಲಿ ರಾಷ್ಟ್ರೀಯತೆ,

ಸಾಮಾಜಿಕ ಐಕ್ಯತೆ, ಸ್ವತಂತ್ರ ವಿಚಾರತೆ, ಕನ್ನಡ ಸಂಸ್ಕøತ ಪ್ರೇಮ ಇತ್ಯಾದಿ ಉನ್ನತ ಅಂಶಗಳನ್ನು ತುಂಬಿ ಜಾಗೃತವಾಗಿಸುವದಾಗಿದೆ. ರಾಷ್ಟ್ರಮಟ್ಟದ ಶಿಕ್ಷಣ ತತ್ವಜ್ಞಾನಿಗಳಾಗಿರುವ ಪೂಜ್ಯರು ಮುಂದೆವರೆದ ಶಿಕ್ಷಣ ಪದ್ದತಿಯ ಅಧ್ಯಯನದಲ್ಲಿ ದಾಸೋಹದ ಅರಿವನ್ನು ರೂಪಿಸುತ್ತಿರುವರು. ರಾಜ್ಯದ ಹಿಂದುಳಿದ ಜಿಲ್ಲೆಗಳಲ್ಲಿ ಒಂದಾದ ಕಲಬುರ್ಗಿ ಪರಿಸರದಲ್ಲಿ ಪೂಜ್ಯ. ಡಾ. ಶರಣಬಸವಪ್ಪ ಅವರ ಶಿಕ್ಷಣ ದರ್ಶನ–ಚಿಂತನೆಗಳು ಸಮಕಾಲೀನತೆಗಿಂತಲೂ ಮುಂದುವರೆದವುಗಳಾಗಿ, ಇಲ್ಲಿನ ಜನತೆಯ ಅಜ್ಞಾನದ ಕತ್ತಲೆಯನ್ನು ಕಳೆಯುವಲ್ಲಿ ಬೆಳಕಿನ ಪುಂಜಗಳಾಗಿವೆ. ಅವರು ಇಂದು ಕಟ್ಟಿ ಬೆಳೆಯಿಸುತ್ತಿರುವ ವೈಜ್ಞಾನಿಕ–ತಾಂತ್ರಿಕ ಸಂಸ್ಥೆಗಳು ಮೇಲಿನ ಮಾತಿಗೆ ಸಾಕ್ಷಿಯನ್ನು ಹೇಳುತ್ತಲಿವೆ.

ಕನ್ನಡದ ಪರಿಸರದಲ್ಲಿ ಜೀವಿಸಿರುವ ಪೂಜ್ಯ ಡಾ. ಶರಣಬಸವಪ್ಪ ಅಪ್ಪ ಅವರು ಮಹಾದಾಸೋಹಿ ಶರಣಬಸವೇಶ್ವರರ ಅಂತರಂಗದ ಬದುಕಿನ ತತ್ವಗಳನ್ನು ತಮ್ಮ ಬದುಕಿನ ಆಚರಣೆಯಲ್ಲಿ ತಂದುಕೊಂಡು ಆ ಜೀವನದ ಅಭಿವ್ಯಕ್ತಿಯೆಂಬಂತೆ ಕನ್ನಡದಲ್ಲಿ ಮಹಾದಾಸೋಹ ಸೂತ್ರಗಳನ್ನು ರಚಿಸಿದ್ದಾರೆ. ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಮಹಾದಾಸೋಹ ಸೂತ್ರ ಪ್ರಕಾರವೊಂದು ಹೊಸ ಆಯಾಮವಾಗಿ ಕಾಣುತ್ತದೆ. ಇವರ ಈ ಮಹಾದಾಸೋಹ ಸಿದ್ದಾಂತವು ಮತೀಯವಾದ ಬಂಧನವನ್ನು ಅಳಿಸುವಲ್ಲಿ ಮತ್ತು ವಿಶ್ವದ ಸಕಲರು ಆಚರಿಸಬಹುದಾದ ಸರ್ವಕಾಲಿಕ ಸತ್ಯವಾದ ಸಿದ್ಧಾಂತವಾಗಿ ಮಹಾದಾಸೋಹ ದರ್ಶನವಾಗಿ ಹೆಸರುವಾಸಿಯಾಗಿದೆ. ಕರ್ನಾಟಕ ಸರ್ಕಾರ ಆರಂಭಿಸಿರುವ ಅಕ್ಷರ ದಾಸೋಹ, ಅನ್ನ ದಾಸೋಹ ಅಲ್ಲಿ ಅಲ್ಲಿ ಕೇಳಿಬರುತ್ತಿರುವ ವಿಜ್ಞಾನ ದಾಸೋಹ, ಕಲಾ ದಾಸೋಹ ಎಂಬಂತ ಮಾತುಗಳು ಪೂಜ್ಯ ಅಪ್ಪಾ ಅವರ ಈ ದಾಸೋಹ ತತ್ವದ ಫಲ ಎಂದು ಹೇಳಬಹುದು.

ಕಲಬುರ್ಗಿಯನ್ನು ಅಂತರಾಷ್ಟ್ರೀಯ ಪ್ರವಾಸಿ ಕೇಂದ್ರವನ್ನಾಗಿಸುವಲ್ಲಿ ಅವರು ಕೈಕೊಂಡ ಕೆಲಸಗಳು ಅವರ ದೂರದೃಷ್ಟಿಯ ಫಲವಾಗಿವೆ. ಮಹಾದಾಸೋಹಿ ಶರಣಬಸವೇಶ್ವರ ಮಹಾಸಮಾಧಿಯ ಶಿಖರವನ್ನು ಬಂಗಾರಮಯವಾಗಿ ಮಾಡುವ ಉತ್ಕಟ ಆಶೆ ಉಳ್ಳವರಾಗಿದ್ದು ಈಗ ಆ ಕೆಲಸ ಪ್ರಾರಂಭವಾಗಿದೆ. ಶಿಖರದ ಮೇಲ್ಭಾಗ (ತತ್ತಿ) ಈಗಾಗಲೇ ಬಂಗಾರದಲ್ಲಿ ಮಾಡಲಾಗಿದೆ.

ಕನ್ನಡ ಸಾಹಿತ್ಯ, ಸಂಸ್ಕøತಿ, ಧರ್ಮ ವಿಶ್ವಮಾನ್ಯ ಮೌಲ್ಯಗಳಾದ ಸತ್ಯ, ಅಹಿಂಸೆ, ದಯೆ, ಕಾಯಕ, ದಾಸೋಹ ತತ್ವಗಳನ್ನು ಆಧ್ಯಾತ್ಮ ಸಂಸತ್ತು ಎನಿಸಿದ ಅನುಭವ ಮಂಟಪದ ಮುಖಾಂತರ ಸಕಲ ಜೀವಾತ್ಮರ ಲೇಸನ್ನೇ ಬಯಸಿದವರು ವಿಶ್ವಮಾನ್ಯ ಬಸವಣ್ಣನವರು. 14 ಅಡಿ ಎತ್ತರವುಳ್ಳ ಕಂಚಿನ 15 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ತಯಾರಿಸಿದ ಅಶ್ವಾರೂಢವಾದ ಬಸವಣ್ಣನವರ ಪುತ್ಥಳಿಯನ್ನು ದಿನಾಂಕ 28/04/2003ರಂದು ದೇಶದ ಸಂಸತ್ ಭವನದ ಆವರಣದಲ್ಲಿ ಸ್ಥಾಪಿಸಿದರು. ಆ ಪ್ರತಿಮೆಯನ್ನು ಅನಾವರಣಗೊಳಿಸಿದವರು ಅಂದಿನ ರಾಷ್ಟ್ರಪತಿಗಳಾದ ಡಾ. ಎ.ಪಿ.ಜೆ.ಅಬ್ದುಲ್ ಕಲಾಂ ಅವರು. ಪೂಜ್ಯ ಅಪ್ಪಾಜಿಯವರ ಈ ಮಹಾನ್ ಕೆಲಸ ಕರ್ನಾಟಕದ ಇತಿಹಾಸದಲ್ಲಿ ಒಂದು ಐತಿಹಾಸಿಕ ಘಟನೆ. ಕನ್ನಡಿಗರಷ್ಟೇ ಅಲ್ಲ ಇಡೀ ವಿಶ್ವವೇ ಹೆಮ್ಮೆ ಪಡುವ ಕೆಲಸವನ್ನು ಪೂಜ್ಯರು ಮಾಡಿ ತೋರಿಸಿದ್ದಾರೆ. ಬಸವಣ್ಣನವರನ್ನು ಜಗತ್ತಿಗೆ ಪರಿಚಯಿಸಿದ್ದಾರೆ ಈ ಕಾರ್ಯದ ಮುಖಾಂತರ.

ಹೀಗೆ ಪೂಜ್ಯರ ಸಾಮಾಜಿಕ, ಶೈಕ್ಷಣಿಕ, ಸಾಹಿತ್ಯಿಕ, ಸಾಂಸ್ಕøತಿಕ ಮತ್ತು ಆಧ್ಯಾತ್ಮಿಕ ಕಾರ್ಯಗಳು ಈ ಹೈದ್ರಾಬಾದ ಕರ್ನಾಟಕದಲ್ಲಿ ಬಹಳಷ್ಟು ಆಗಿವೆ, ಅಗುತ್ತಲಿವೆ. ಇಂತಹ ಮಹಾನ್ ಕಾರ್ಯಕ್ಕಾಗಿ ಅವರಿಗೆ ಅನೇಕ ಪ್ರಶಸ್ತಿಗಳು ಒಲಿದು ಬಂದಿವೆ. ಗುಲಬರ್ಗಾ ವಿಶ್ವವಿದ್ಯಾಲಯ ಇವರಿಗೆ ಗೌರವ ಡಾಕ್ಟರೇಟ ಪದವಿಯನ್ನು 1992ರಲ್ಲಿ ಗೌರವಿಸಿದೆ. ಕರ್ನಾಟಕ ರಾಜ್ಯ 1998ರಲ್ಲಿ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿದೆ. ನಾಸಿಕದ ಪುಣ್ಯ ಶ್ಲೋಕ ಸದ್ಗುರು ಶಿವ ಪಾರ್ವತಿ ಪ್ರತಿಷ್ಠಾನದವರು ಆಧ್ಯಾತ್ಮಿಕ ಪುರಸ್ಕಾರದಿಂದ ಅವರನ್ನು ಗೌರವಿಸಿದ್ದಾರೆ.

## References


1. Sharanabasaveshwararu Hagu Avar Parisarada sahitya, Author: Dr. S.M. Hiremath.
2. Kalaburagiya Sharana Basava, Author: Dr. L. Basavaraju.
3. Sharanabasaveshwar Darshan, Author: Shri B.G.Yellati.À